ಪಿಡಬ್ಲೂ 01

ಪ್ರಮಾಣ ವಚನ ಭೋದಿಸಿದ ದಿನಾಂಕಃ17-06-2022.

ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ

ಭದ್ರೇಗೌಡರಿಗೆ 3 ಗಂಡು ಮತ್ತು ಒಬ್ಬಳು ಹೆಣ್ಣು ಮಗಳು. ಚಾಸಾ-4 ನನ್ನ ಅಣ್ಣ. 1 ನೇ ಆರೋಪಿ ನನ್ನ ತಂದೆ ತಾಯಿಗೆ ಕೊನೆಯ ಮಗ. 3 ನೇ ಆರೋಪಿ ನನ್ನ ಅಕ್ಕನ ಮಗ ಎಂದರೆ ಹೌದು. 2 ನೇ ಆರೋಪಿ ನನ್ನ ತಮ್ಮನ ಹೆಂಡತಿ ಎಂದರೆ ಹೌದು. ನಾನು ನನ್ನ ಆಸ್ತಿಗೆ ಸಂಬಂಧಪಟ್ಟಂತೆ ಒಟ್ಟು ಸಿವಿಲ್ ನ್ಯಾಯಾಲಯದಲ್ಲಿ 3 ಕೇಸುಗಳನ್ನು ಹಾಕಿರುತ್ತೇನೆ. ನಾನು ಓ ಎಸ್ 42/2013 ದಾವೆಯನ್ನು ಇಂಜೆಂಕ್ಷನ್ ಗಾಗಿ ಹೂಡಿದ್ದು ಅದು ವಜಾ ಆಗಿದೆ ಎಂದರೆ ಹೌದು ನಾವು ಅಪೀಲ್ ಹೋಗಿದ್ದೇವೆ ಎಂದು ನುಡಿಯುತ್ತಾರೆ. ಸದರಿ ಅಪೀಲು ವಜಾ ಆಗಿದೆ ಎಂದರೆ ಹೌದು. ಓ ಎಸ್ 42/13 ರ ದಾವೆಯನ್ನು ಕೇಶವ ಮತ್ತು ಸದಾಶಿವ ಅವರ ಮೇಲೆ ಹಾಕಿದ್ದೇನೆ ಎಂದರೆ ನಾನು ಕೇಶವ ಅವರ ಮೇಲೆ ಮಾತ್ರ ಹಾಕಿದ್ದೇನೆ ಎಂದು ನುಡಿಯುತ್ತಾರೆ.

ಓ ಎಸ್ 80/2013 ಕೇಸನ್ನು ನಾನು ನನ್ನ ತಂದೆ ಭದ್ರೇಗೌಡರು 1 ನೇ ಆರೋಪಿಯ ಮೇಲೆ ಹಾಕಿರುತ್ತೇನೆ ಎಂದರೆ ಹೌದು. ಸದರಿ ಕೇಸ್ ನನ್ನ ಪರವಾಗಿ ಡಿಕ್ರಿಯಾಯಿತು ಅದರ ವಿರುದ್ದ ಎದುರುದಾರರು ಮೇಲ್ಮನವಿ ಸಂಃ 66/2019 ನ್ನು ಸಲ್ಲಿಸಿದ್ದು ಸದರಿ ಮೇಲ್ಮನವಿಯಲ್ಲಿ ದಿನಾಂಕಃ30-07-2021 ರಂದು ತೀರ್ಪು ಆಗಿರುತ್ತದೆ. ಸದರಿ ತೀರ್ಪಿನ ವಿರುದ್ಧ ನಾನು ಯಾವುದೇ ಮೇಲ್ಮನವಿ ಸಲ್ಲಿಸಿಲ್ಲ. ಸದರಿ ಆರ್. ಎ. ತೀರ್ಪಿನಲ್ಲಿ ಮನೆಯನ್ನು ಸದರಿ ಕೇಸಿನ ಮೇಲ್ಮನವಿದಾರರಿಗೆ ಬಿಟ್ಟುಕೊಡಬೇಕು ಮತ್ತು ಅವರಿಗೆ ನಾನು 15 ಸಾವಿರ ಹಣವನ್ನು ಕೊಡಬೇಕು ಎಂದು ತೀರ್ಪು ಆಗಿರುತ್ತದೆ ಎಂದರೆ ಸರಿಯಲ್ಲ.

ದಿನಾಂಕಃ13-06-2022 ರಂದು ಸದರಿ ಮನೆಯ ಮೇಲ್ಛಾವಣಿಯನ್ನು ನಾನು ಕಿತ್ತುಕೊಂಡು ಹೋದ ಬಗ್ಗೆ ದೂರು ಮತ್ತು ಎಫ್ ಐ ಆರ್ ದಾಖಲಾಗಿದೆ ಎಂದರೆ ನನ್ನ ಮನೆಯನ್ನು ನಾನು ಕಿತ್ತುಕೊಂಡು ಹೋಗಿದ್ದೇನೆ ಎಂದು ನುಡಿಯುತ್ತಾರೆ.

ನನ್ನ ಮೇಲೆ ಇಸ್ಪಿಟ್ ಆಡಿದ ಬಗ್ಗೆ ಪೋಲೀಸರು ಒಂದು ಕೇಸ್ ದಾಖಲು ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಡಿಸೆಂಬರ್ 1997 ರಲ್ಲಿ ನಾನು ಮತ್ತು ಚಾಸಾ-4 ರವರು ನನ್ನ ತಂದೆ ಬೆಳೆದಿದ್ದ ಫಸಲನ್ನು ಯಾವುದೇ ಕೆಲಸ ಮಾಡದಿದ್ದರೂ ಅವುಗಳನ್ನು ನಾವು ಕಟಾವು ತಮಾಡಿ ತೆಗೆದುಕೊಂಡು ಹೋಗಿದ್ದೇವೆ ಎಂದು ದೂರನ್ನು ನೀಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ದೂರಿನಲ್ಲಿ ನನ್ನ ತಂದೆಯವರು ನನ್ನಿಂದ ವತ್ತು ಚಾಸಾ-4 ರವರಿಂದ ನನಗೆ ಹಾಗೂ ನನ್ನ ಕಿರಿಯ ಮಗನಿಗೆ ಜೀವ ಬೆದರಿಕೆ ಇದೆ ಎಂದು ದೂರಿನಲ್ಲಿ ಹೇಳಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

ದಿನಾಂಕಃ03-04-1998 ಹಾಗೂ ದಿಃ 09-08-1998 ರಂದು ನನ್ನ ತಂದೆಯ ಮನೆಯಲ್ಲಿದ್ದ ಬಂಗಾರವನ್ನು ನಾನು ಮತ್ತು ಚಾಸಾ-4 ರವರು ಕದ್ದುಕೊಂಡು ಹೋಗಿದ್ದೇವೆ ಎಂದು ದೂರನ್ನು ಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಆ ಸಂದರ್ಭದಲ್ಲಿ ಚಾಸಾ-4 ರವರ ಹೆಂಡತಿ ನನ್ನ ತಂದೆಯವರಿಗೆ ಊಟ ಕೊಡದೇ ಮನೆಯಿಂದ ಹೊರಗಡೆ ಹಾಕಿರುತ್ತಾರೆ ಎಂದರೆ ಸರಿಯಲ್ಲ.

ನನ್ನ ಮದುವೆಯಾವ ವರ್ಷದಲ್ಲಿ ಆಯಿತು ಎಂದು ನನಗೆ ನೆನಪಿಲ್ಲ. 2001 ನೇ ಇಸವಿಯಲ್ಲಿ ನಮ್ಮ ಕುಟುಂಬದಲ್ಲಿ ನೊಂದಣಿ ಹಿಸ್ಸೆ ಪತ್ರ ಆಗಿರುತ್ತದೆ ಎಂದರೆ ಹೌದು. ಸದರಿ ಹಿಸ್ಸೆ ಪತ್ರದಲ್ಲಿ ನನಗೆ ಮತ್ತು ಚಾಸಾ-4 ರವರಿಗೆ ಒಂದು ಹಿಸ್ಸೆ ಹಾಗೂ ನನ್ನ ತಂದೆ ಮತ್ತು 1 ನೇ ಆರೋಪಿಗೆ ಒಂದುಹಿಸ್ಸೆ ಎಂದು ಪತ್ರ ಆಗಿರುತ್ತದೆ ಎಂದರೆ ಹೌದು. ಸದರಿ ಹಿಸ್ಸೆಯ ಪ್ರಕಾರ ಗೀಜಗ ಗ್ರಾಮದಲ್ಲಿರುವಂತಹ ಹಳೆ ಮನೆ ನಮ್ಮ ಭಾಗಕ್ಕೆ ಬಂದಿರುತ್ತದೆ ಎಂದರೆ ಹೌದು. ಸ.ನಂ. 10/1 ರಲ್ಲಿ ಒಂದು ಹಂಗಾಮಿ ಮನೆ ಇದ್ದು ಸದರಿ ಮನೆಯಲ್ಲಿ ನನ್ನ ತಂದೆ ಹಾಗೂ 1 ನೇ ಆರೋಪಿ ಇರಬೇಕು ಎಂದು ಇದ್ದು ಸದರಿ ಮನೆಯನ್ನು ನನಗೆ ಕೊಟ್ಟು ನನ್ನಿಂದು 15 ಸಾವಿರ ರೂ. ಅವರು ಪಡೆಯ ಬೇಕು ಎಂದು ಬರೆದಿದೆ ಎಂದರೆ ಹೌದು. ಹಳೇ ಸ.ನಂ. 10/1

ಹೊಸ ಸ. ನಂಃ 10/3 ರಲ್ಲಿ ನನ್ನ ತಂದೆ ಮೃತಪಟ್ಟಿರುತ್ತಾರೆ ಎಂದರೆ ಹೌದು. ನನ್ನ ತಂದೆ ದಿನಾಂಕಃ 03-07-2016 ರಂದು ಮೃತಪಟ್ಟಿರುತ್ತಾರೆ ಎಂದರೆ ಹೌದು. ಸ.ನಂ. 10/3 ಈಗ ಸ.ನಂಃ 10/5 ಆಗಿದೆ ಎಂದರೆ ಹೌದು. ಸ.ನಂಃ 10/5 ರಲ್ಲಿರು ಮನೆ 1 ನೇ ಆರೋಪಿಗೆ ಆಗಿದ್ದು ಸದರಿ ಮನೆಗೆ ನಾನು 15 ಸಾವಿರ ಕೊಟ್ಟು ಹೊರಗೆ ಬರಬೇಕು ಎಂದು ಆಗಿರುತ್ತದೆ ಎಂದರೆ ಸರಿಯಲ್ಲ.

( ಈ ಹಂತದಲ್ಲಿ ನ್ಯಾಯಾಲಯದ ಅವಧಿ ಮುಗಿದ ಕಾರಣ ಮುಂದುವರೆದ ಪಾಟೀಸವಾಲಿಗೆ ಸಮಯ ನೀಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯ ಪ್ರಕಾರ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಣಗೊಳಿಸಲಾಯಿತು)

ಓ ಹೇ ಕೇ ಸ ಇದೆ

5 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಶಿವಮೊಗ್ಗ (ಪೀಠಾಸೀನ, ಸಾಗರ).